ಊ) ಈಗಾಗಲೇ ಪೂರ್ಣಗೊಳಿಸಲಾಗಿದೆ.

ಋ) ಸರ್ಕಾರದ ಪರಿಶೀಲನೆಯಲ್ಲಿದೆ.

**ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಬೃಹತ್ ನೀರಾವರಿ ಯೋಜನೆ**

204 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನ ನದಿಗೆ ಬೃಹತ್ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು 2000ಸಾಲಿನ ಒಳಗಾಗಿ ಪೂರ್ತಿಗೊಳಿಸುವುದರಲ್ಲಿ ಕುರಕುಂಟಿ, ಐಹಾಳ್, ತೆಲಕೂರು ಏತ ನೀರಾವರಿ ಯೋಜನೆಗಳು ಆದರೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದ ಅವುಗಳನ್ನು ಸ್ಥಗಿತಗೊಳಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಒಂದು ವೇಳೆ ಆ ಯೋಜನೆ ಪ್ರಾರಂಭ ಮಾಡಿದರೆ ಪೂರ್ತಿಗೊಳ್ಳಲು ಕನಿಷ್ಠ 10 ವರ್ಷಗಳಾದರೂ ಬೇಕಾಗುವುದಿಲ್ಲವೇ?*

*ಇ) ಆ ಯೋಜನೆಯನ್ನು 2000 ಇಸವಿಯ ಒಳಗೆ ಮುಗಿಸಿ ರೈತರಿಗೆ ನೀರಾವರಿ ಅನುಕೂಲ ಮಾಡಿಕೊಡಲಾಗುವುದೇ?*

*ಈ) ಒಂದು ಕಡೆ ಏತ ನೀರಾವರಿ ಯೋಜನೆಗಳು ರದ್ದು ಮಾಡಿ ರೈತರಿಗೆ ನೀರಾವರಿ ಸೌಲಭ್ಯ ಸಿಗುವುದನ್ನು ತಪ್ಪಿಸಿ ಇನ್ನೊಂದು ಕಡೆ ಬೃಹತ್ ನೀರಾವರಿ ಯೋಜನೆ ಇಲ್ಲದಂತೆ ಮಾಡಿ ಆ ಭಾಗದ ರೈತರಿಗೆ ನೀರಾವರಿ ಸೌಲಭ್ಯ ಸಿಗದಂತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಉ) 1994-95ನೇ ಸಾಲಿನಲ್ಲಿ ಆ ಕಾಗಿನ ನದಿಯ ಬೃಹತ್ ಯೋಜನೆಯನ್ನು ಪ್ರಾರಂಭ ಮಾಡಿ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದೇ?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಕುರಕುಂಟಿ, ಐಹಾಳ್ ಮತ್ತು ತೆಲಕೂರು ಏತ ನೀರಾವರಿ ಯೋಜನೆಗಳಡಿ ಉದ್ದೇಶಿಸಲಾಗಿರುವ ಅಚ್ಚುಕಟ್ಟು ಪ್ರದೇಶವು ಕಾಗಿನ ನದಿಗೆ ಅಡ್ಡಲಾಗಿ ಉದ್ದೇಶಿಸಿರುವ ಕಾಗಿನ ಮಧ್ಯಮ ನೀರಾವರಿ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ ಈ ಮೂರು ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೇ ಇಲ್ಲವೇ ಎಂಬ ಬಗ್ಗೆ ಸುಧೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

ಆ), ಇ) ಮತ್ತು ಈ) ಕಾಗಿನ ಮಧ್ಯಮ ನೀರಾವರಿ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ಉ) ಈ ಯೋಜನೆಯ ವರದಿಯನ್ನು ತಯಾರಿಸಿ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರವೇ ಅದರ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

**ತುಮಕೂರು ಜಿಲ್ಲಾ ಶಿರಾ ಲೋಕೋಪಯೋಗಿ ಉಪ ವಿಭಾಗಕ್ಕೆ ಅಭಿವೃದ್ಧಿ ಕಾಮಗಾರಿಗೆ ಹಣ ಬಿಡುಗಡೆ**

305 - ಶ್ರೀ ಸಿ. ವೀರಭದ್ರಯ್ಯ (ಕೊರಟಿಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ತುಮಕೂರು ಜಿಲ್ಲೆ ಶಿರಾ ಲೋಕೋಪಯೋಗಿ ಉಪ ವಿಭಾಗಕ್ಕೆ ಎಷ್ಟು ತಾಲ್ಲೂಕುಗಳು ಸೇರಿವೆ;*

*ಆ) ಆ ತಾಲ್ಲೂಕುಗಳಿಗೆ 1990 ರಿಂದ 1994ರ ಜನವರಿ ಅಂತ್ಯದವರೆಗೆ ಸರ್ಕಾರದಿಂದ ಅಭಿವೃದ್ಧಿ ಕಾಮಗಾರಿಗಳಿಗೆ ತಾಲ್ಲೂಕುವಾರು ಎಷ್ಟೆಷ್ಟು ಹಣ (ಎಲ್ಒಸಿ) ಬಿಡುಗಡೆಯಾಗಿದೆ;*

*ಇ) ಈ ರೀತಿ ಸರ್ಕಾರದ ಹಣ ಸಮವಾಗಿ ಕೊಡದಿರಲು ಕಾರಣವೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಎರಡು ತಾಲ್ಲೂಕುಗಳು. ಶಿರಾ ಮತ್ತು ಕೊರಟಗೆರೆ.

ಆ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳಿಗೆ ಆಗಿರುವ ವೆಚ್ಚ ಕೆಳಕಂಡಂತಿದೆ:

(ಲಕ್ಷ ರೂ.ಗಳಲ್ಲಿ)

| ವರ್ಷ | ಶಿರಾ ತಾಲ್ಲೂಕು | ಕೊರಟಗೆರೆ ತಾಲ್ಲೂಕು |
|---|---|---|
| 1990-91 | 24.44 | 9.54 |
| 1991-92 | 58.50 | 36.71 |
| 1992-93 | 36.52 | 21.84 |
| 1993-94 (ಜನವರಿ 94ವರೆಗೆ) | 14.58 | 16.68 |

ಇ) ಲೋಕೋಪಯೋಗಿ ಇಲಾಖೆಯಲ್ಲಿ ತಾಲ್ಲೂಕುವಾರು ಹಣ ಭರವಸೆ ಪತ್ರ ನೀಡುವುದಿಲ್ಲ. ಆಯಾ ಲೋಕೋಪಯೋಗಿ ವಿಭಾಗಗಳಲ್ಲಿ ಆಯವ್ಯಯದಲ್ಲಿ ಸೇರಿಸಿದಂತಹ ಕಾಮಗಾರಿಯನ್ನು ಪರಿಗಣಿಸಿ ಅನುದಾನ ನಿಗದಿಪಡಿಸಿರುತ್ತದೆ. ರಸ್ತೆ ನಿರ್ವಹಣೆಗೆ ಅನುದಾನವನ್ನು ರಸ್ತೆಗಳ ಪ್ರತಿ ಕಿ.ಮೀ. ಉದ್ದವನ್ನು ಪರಿಗಣಿಸಿ ನಿಗದಿಪಡಿಸಲಾಗುವುದು. ಪ್ರತಿ ವಿಧಾನ ಸಭಾ ಕ್ಷೇತ್ರದ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಎಲ್ಲಾ ಕ್ಷೇತ್ರಕ್ಕೂ ಸಮನಾಗಿ ಅನುದಾನ ನಿಗದಿಪಡಿಸಲಾಗುತ್ತಿದೆ.

**ಕೊರಟಗೆರೆ-ದಾಬಸ್‌ಪೇಟೆ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್**

311 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೊರಟಗೆರೆ - ದಾಬಸ್ಪೇಟೆ ಪ್ರಧಾನ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್ ಇದ್ದದನ್ನು ರೈಲ್ವೆ ಸಿಬ್ಬಂದಿಯವರು ಕೆಡವಿಹಾಕಿ ಬಸ್ಸು ಸಂಚಾರ ಹಾಗೂ ಜನ ಜಾನುವಾರುಗಳು ಓಡಾಡಲು ತೊಂದರೆಯಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ.*

*ಆ) ಹಾಗಿದ್ದಲ್ಲಿ, ಈ ಹೈ ಲೆವೆಲ್ ಬ್ರಿಡ್ಜ್ ಕಟ್ಟಲು ಸರ್ಕಾರ ಕೈಗೊಂಡಕ್ರಮಗಳೇನು?*

*ಇ) ಸದರಿ ಕೆಲಸ ಎಷ್ಟು ದಿನಗಳಲ್ಲಿ ಪ್ರಾರಂಭವಾಗಲಿದೆ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ವಿಷಯದ ಬಗ್ಗೆ ರೈಲ್ವೆ ಇಲಾಖೆಗೆ ಅಂದಾಜನ್ನು ತಯಾರಿಸಲು ಪತ್ರ ಬರೆಯಲಾಗಿದೆ.

ಇ) ವಿಧಿವಿಧಾನಗಳನ್ನು (ಫಾರ್ಮಾಲಿಟೀಸ್) ಪಾಲಿಸಿ, ಹಣ ಲಭ್ಯತೆಯ ಮೇರೆಗೆ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

**ಲೋಕೋಪಯೋಗಿ ಇಲಾಖೆ ವಸತಿ ಗೃಹಗಳ ನೀರಿನ ಪೂರೈಕೆ ವೆಚ್ಚವನ್ನು ನೌಕರರ ವೇತನ ಪಟ್ಟಿಯಲ್ಲಿ ಮುರಿದುಕೊಳ್ಳುವ ಬಗ್ಗೆ**

331 - ಶ್ರೀ ಮುನಿನರಸಿಂಹಯ್ಯ (ದೇವನಹಳ್ಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?